ಹಿಂದೀ ಹಾಡು ನನ್ನನ್ನು ಯಾವುದೋ ಅನೂಹ್ಯ ಲೋಕದಲ್ಲಿ ತೇಲಿಸಲಾರಂಭಿಸಿತು.

ಥಟ್ಟನೆ ಎಚ್ಚರವಾಯಿತು. ಯಾರೋ ಗೌರಿಯ ದನಿಯಲ್ಲಿ ಅಣ್ಣಾ ಎಂದು ಕೂಗಿದಂತಾಯ್ತು. ನಾನು ಆ ಫೋನ್ ಕರೆಯಿಂದ ವಿಚಲಿತನಾಗಿದ್ದೇನೆ. ಹಾಗೆಂದೇ ಗೌರಿಯ ನೆನಪುಗಳು ನುಗ್ಗಿ ಬಂದಿವೆ.

ನಾನು ಕಿಟಿಕಿಯ ಬಳಿ ಹೋಗಿ ನಿಂತೆ. ಆಗಲೇ ಕತ್ತಲೆಯಾಗುತ್ತಿತ್ತು. ಬೆಂಗಳೂರಿನ ಮನೆ ಮನೆ ಬೀದಿಗಳು ಬಣ್ಣ ಬಣ್ಣದ ಲೈಟುಗಳಿಂದ ಝುಗಝುಗಿಸುತ್ತಿತ್ತು. ಹಾಗೇ ನೋಡುತ್ತಾ ನಿಂತೆ.

★★★

ಅಂತೂ ಕುಮಾರಣ್ಣನೊಡನೆ ಮೀಟಿಂಗ್ ಫಿಕ್ಸ್ ಆಯ್ತು. ನಾಳೆ ಬೆಳಿಗ್ಗೆ ಎಂಟು ಗಂಟೆಗೆ ಸರಿಯಾಗಿ ಬೆಂಗಳೂರಿನ ಹೊರವಲಯದ ಗೋಲ್ಡನ್ ಪಾರ್ಕ್‌ನಲ್ಲಿ. ಫೋನ್ ಸ್ವೀಕರಿಸಿದಾತ ಒಬ್ಬಳೇ ಬರುವಂತೆ ಕಡ್ಡಾಯವಾಗಿ ತಿಳಿಸಿದ್ದ. ಅದೂ ಬುರ್ಖಾ ಹಾಕಿಕೊಂಡು. ನನಗೆ ನಗು ಬಂತು. ನನಗೂ ಅದೇ ಬೇಕಾಗಿತ್ತು. ಈಗ ರಸ್ತೆಯಲ್ಲಿನ ಎಲ್ಲರೂ ಪತ್ರಕರ್ತರೇ. ಎಲ್ಲರ ಕೈಯಲ್ಲೂ ಕ್ಯಾಮರಾಗಳಿರುತ್ತವೆ, ಮೊಬೈಲ್ ಫೋನ್‌ಗಳಿವೆ. ಯಾರು ಯಾರ ಫೋಟೊ ತೆಗೆದರು ಅಂತ ಗೊತ್ತಾಗುವುದೇ ಇಲ್ಲ, ಬೆಳಿಗ್ಗೆ ಟೀವಿಯಲ್ಲಿ ಬ್ರೇಕಿಂಗ್ ನ್ಯೂಸ್ ಬಂದಾಗಲೇ ಅದರ ಆಳದ ಅರಿವು.

